ಶ್ರೀ ಜೆ. ಎಚ್. ಪಾಟೇಲ್.—ಯಾವ ನಿಗಮ ಮತ್ತು ಮಂಡಲಿ ಇದೆ ಅದರ ಕೆಲಸ ಏನು ? ಅದನ್ನು ನಿಭಾಯಿಸತಕ್ಕಂಥ ಜ್ಞಾನ, ನಮ್ಮ ಯೋಜನೆಯಲ್ಲಿರತಕ್ಕಂಥ ಅಥವಾ ನಿಮ್ಮ ಜೀತೆಯಲ್ಲಿರತಕ್ಕಂಥ ಯಾವ ವ್ಯಕ್ತಿಗೆ ಅವರ ಸಂಬಂಧ ಏನ್ನುವುದನ್ನು ನೋಡಿದ್ದೇವೆಯೇ ವಿನಹಃ ಬಳಕೆ ಯಾವುದೇ ಕನ್ಸಿಡರೇಷನ್ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಪರಿಣತರನ್ನು ನೇಮಕ ಮಾಡಿ ಅದನ್ನು ಉದ್ಧಾರ ಮಾಡುವುದನ್ನು ಬಿಟ್ಟು ಅವರು ಪೂರ್ತಿಯಾಗಿ ಹಾಳು ಮಾಡಿದವರನ್ನು ಇಲ್ಲಿ ಇಟ್ಟಿದ್ದೀರಿ. ಅವರು ತಮ್ಮ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಯನ್ನೇ ಉದ್ಧಾರ ಮಾಡಿಕೊಳ್ಳದೇ ಇದ್ದರೆ ಇನ್ನು ಕರ್ನಾಟಕದಲ್ಲಿರತಕ್ಕಂಥ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳನ್ನು ಯಾವರೀತಿ ಉದ್ಧಾರ ಮಾಡುತ್ತಾರೆ ? ಇದರಲ್ಲಿ ಪರಿಣತವನ್ನು ನೇಮಕ ಮಾಡಿದ್ದೀರೋ ಅಥವಾ ನಾಮಕಾವಸ್ತೆಗೆ ಸಾಮಾನ್ಯವಾಗಿ ರಾಜಕೀಯ, ದಕ್ಷತೆ ಇರುವವರನ್ನು ನೇಮಕ ಮಾಡಿದ್ದೀರೋ ?

ಶ್ರೀ ಜೆ. ಎಚ್. ಪಾಟೇಲ್ ಇವೆರಡನ್ನು ನೋಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್,—ಮೊದಲು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಇದರಲ್ಲಿ ರಾಜಕೀಯ ನೇಮಕಾತಿ ಇದೆ.

ಶ್ರೀ ಜೆ. ಹೆಚ್. ಪಾಟೇಲ್—ಗ್ರಾಮ ಪಕ್ಷದಲ್ಲಿ ಸಾಕಷ್ಟು ಜನ ದಕ್ಷರೂ ಪ್ರಾಮಾಣಿಕರೂ, ಇನ್ನೂ ಬಹಳ ಜನ ಸಿಕ್ಕದೇ ಇರುವುದರಿಂದ ನಾವು ಅವರ್ಯಾರನ್ನು ಕನ್ಸಿಡರ್ ಮಾಡುವುದಕ್ಕಾಗಲಿಲ್ಲ?

ಶ್ರೀ ಬಿ. ಎ. ಉಮ್ಮರಬ್ಬ.—ಒಂದು ರೀತಿಯಲ್ಲಿ ಈ ಪ್ರತಿಯೊಂದು ಮಂಡಲಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವಾಗ ಮೂಲತಃ ಅದು ಒಳ್ಳೆಯ ರೀತಿಯಲ್ಲಿ ಕೆಲಸವಾಗಬೇಕು ಎನ್ನುವ ಉದ್ದೇಶ ಇರುತ್ತದೆ. ಅವರನ್ನು ನೇಮಕ ಮಾಡುವಂಥ ಮಂಡಲಿಯ ಮೂಲ ಉದ್ದೇಶ ಇದು. ಆದರೆ ಇದರಲ್ಲಿ ಮೂಲಭೂತವಾದ ನಂಬಿಕೆ ಇಲ್ಲದೆ ಇರುವವರನ್ನು ನೇಮಕ ಮಾಡಿದರೆ ಈ ಮಂಡಲಿಯ ಕಾರ್ಯಾಚರಣೆ ಪರಿಸ್ಥಿತಿ ಏನಾಗುತ್ತದೆ, ಉದಾಹರಣೆಗೆ ಖಾದಿ ಬೋರ್ಡಿಗೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರಿ, ಅವರು ಖಾದಿ ಹಾಕುವುದಕ್ಕೇನೇ ಗೊತ್ತಿಲ್ಲದೇ ಹೋದರೆ ಆ ಬೋರ್ಡ್ ಹೇಗಾಗ ಬಹುದು ? ಅಂಥಾವರಿಂದ ಇದರ ಪ್ರಯೋಜನ ಹೇಗಾಗುತ್ತದೆ ?

ಶ್ರೀ ಜೆ. ಹೆಚ್. ಪಟೇಲ್.—ಖಾದಿ ಮಂಡಲಿ ಅಧ್ಯಕ್ಷರು, ಖಾದಿ ಬಟ್ಟೆ ಬಿಟ್ಟು ಬೇರೆ ಬಟ್ಟೆ ಹಾಕುವುದಿಲ್ಲ. ಅವರು ಫಿಲಾಸಫಿಯಲ್ಲಿ ನಂಬಿಕೆಯಿರತಕ್ಕವರು.

ಸರ್ಕಾರಿ ಕಛೇರಿಗಳಲ್ಲಿ ಐದು ದಿನಗಳ ಕೆಲಸದ ಬಗ್ಗೆ

೨೮೩. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ ?

(ಅ) ರಾಜ್ಯದಲ್ಲಿ ವಾರಕ್ಕೆ ೫ ದಿವಸಗಳು ಸರ್ಕಾರಿ ಕಛೇರಿ ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಹಿಂದಿನಂತೆ ೬ ದಿವಸಗಳು ಸರ್ಕಾರಿ ಕಛೇರಿ ನಡೆಯುವಂತೆ ಮಾಡಲು ಆಗಿರುವ ತೊಂದರೆ ಏನು ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಗಳು).—

(ಅ) ಕೆಲವು ಮಹನೀಯರು ತೊಂದರೆಯಾಗುವುದೆಂದು ತಿಳಿಸಿದ್ದಾರೆ.

(ಆ) ಈ ಪದ್ಧತಿಯಲ್ಲಿ ಕೆಲಸದ ಅವಧಿಯು ಮೊದಲಿಗಿಂತ ಹೆಚ್ಚಾಗಿದ್ದರೂ, ತೊಂದರೆ ಆಗಿರ ಬಹುದು. ಕೆಲವು ಮಹನೀಯರು ಹಾಗೂ ಶಾಸಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಲಕ್ಷಿಸಿ ಈ ವಿಷಯವನ್ನು ಪುನರ್ ಪರಿಶೀಲಿಸಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಕ್ಷಣ ಕೂಡ ತಡಮಾಡದೆ ಸರ್ಕಾರಿ ಕಛೇರಿಗಳಲ್ಲಿ ೫ ದಿವಸಗಳ ಕೆಲಸದ ಪದ್ಧತಿಯನ್ನು ರದ್ದು ಮಾಡಿ ೬ ದಿವಸಗಳ ವ್ಯವಸ್ಥೆಯನ್ನು ತರಬೇಕಾಗಿತ್ತದೆ. ಇವತ್ತು ಯಾವುದೇ ಕಛೇರಿಗಳಿಗೆ ಹೋದರೂ ಶುಕ್ರವಾರದ ದಿವಸ ಮಧ್ಯಾಹ್ನ ಬಿಟ್ಟರೆ ಸೋಮವಾರದ ಮಧ್ಯಾಹ್ನದ ಮೇಲೆಯೇ ಸಿಗುತ್ತಾರೆ. ಭೀಕರ ಬರಗಾಲ ಇರತಕ್ಕ ಇಂಥ ಪರಿಸ್ಥಿತಿಯಲ್ಲಿ ಕಛೇರಿಯ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಜನಗಳಿಗೆ ಇದರಿಂದ ಬಹಳ ತೊಂದರೆಯಾಗಿದೆ, ಈ ವಿಚಾರದಲ್ಲಿ ಈ ಮನೆಯ ಎರಡೂ ಕಡೆಯ ಮಾನ್ಯ ಸದಸ್ಯರುಗಳು ವಿರೋಧ ಮಾಡುವುದಿಲ್ಲವೆನ್ನುವ ನಂಬಿಕೆ ನನಗಿದೆ,

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ನನಗೆ ಸಹಾಯ ಮಾಡಿದ್ದಾರೆ. ಸರ್ಕಾರ ಈ ವಿಚಾರದಲ್ಲಿ ವಿಳಂಬ ಮಾಡದೇ ಮೊದಲು ಇದ್ದ ರೀತಿಯಲ್ಲಿಯೇ ೬ ದಿವಸಗಳು ಕಛೇರಿಯ ಕೆಲಸ ನಡೆಯಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಸದಸ್ಯರುಗಳ ಸೂಚನೆಯನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ,— ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡುತ್ತೇನೆಂದು ಉತ್ತರ ಕೊಟ್ಟಿದ್ದಾರೆ. ನನ್ನ ಸೂಚನೆ ಏನೆಂದರೆ ಆದಷ್ಟು ಬೇಗನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ಅಧಿವೇಶನ ಮುಗಿಯುವುದರೊಳಗೆ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ತಮಿಳುನಾಡು, ಕೇರಳ, ಆಂಧ್ರ, ಮಹಾರಾಷ್ಟ್ರ ಈ ನಾಲ್ಕು ರಾಜ್ಯಗಳಲ್ಲಿ ೫ ದಿನದ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಕೇಂದ್ರ ಸರ್ಕಾರದವರು ಕೂಡ ಇದನ್ನು ಜಾರಿಗೆ ತಂದಿದ್ದಾರೆ. ಉತ್ತರ ಹಿಂದೂಸ್ತಾನದಲ್ಲಿ ಕೂಡ ಅನೇಕ ರಾಜ್ಯಗಳ ಈ ಒಂದು ಪದ್ಧತಿಯನ್ನು ಜಾರಿಗೆ ತಂದಿವೆ. ನಮ್ಮಲ್ಲಿ ಇದು ಮುಂದುವರಿಯಬೇಕೆ ಬೇಡವೆ ಎನ್ನುವ ಬಗ್ಗೆ ನಿಮ್ಮೆಲ್ಲರನ್ನು ಕರೆಯಿಸಿ ವಾತನಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—೧೨ ತಿಂಗಳಲ್ಲಿ ೫ ತಿಂಗಳು ರಜಾ ಬರುತ್ತದೆ ೭ ತಿಂಗಳು ಮಾತ್ರ ನೌಕರರು ಕೆಲಸ ಮಾಡುತ್ತಾರೆ. ಶುಕ್ರವಾರ ಮಧ್ಯಾಹ್ನದ ಮೇಲೆ, ಸೋಮವಾರ ಮಧ್ಯಾಹ್ನದ ವರೆಗೆ ಅಧಿಕಾರಿಗಳು ಯಾರೂ ಕೂಡ ಕೈಗೆ ಸಿಗುತ್ತಿಲ್ಲ, ಇದರ ಬಗ್ಗೆ ತಡ ಮಾಡಬೇಡಿ, ಭೀಕರ ಬರಗಾಲದಿಂದ ಜನರಿಗೆ ಬಹಳ ತೊಂದರೆಯಾಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ವಿರೋಧ ಪಕ್ಷದವರನ್ನು ಶೀಘ್ರವಾಗಿ ಕರೆದು ಅವರ ಅಭಿಪ್ರಾಯ ಕೇಳಿ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದಿರಿ. ಎಷ್ಟು ದಿವಸದಲ್ಲಿ ಕರೆಯುವಿರಿ ?

ಶ್ರೀ ರಾಮಕೃಷ್ಣ ಹೆಗಡೆ.—ಬೇಗ ಕರೆಯುತ್ತೇನೆ.

ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರರಿಗೆ ಒದಗಿಸಿರುವ ಬೋಟುಗಳು

೩೫೯. ಶ್ರೀ ಬಿ. ಎಂ. ಇನಬಪ್ಪ (ಉಳ್ಳಾಲ).— ಮಾನ್ಯ ಮೀನುಗಾರಿಕೆ ಹಾಗೂ ಬಂದರು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡದ ಕರಾವಳಿಯಲ್ಲಿ ೧೯೮೩-೮೪ರ ಡಿಸೆಂಬರ್ ಅಖೈರವರೆಗೆ ಮೀನುಗಾರರಲ್ಲಿ ಎಷ್ಟು ಪರ್ಸಿನ್ ದೋಣಿಗಳಿವೆ ಹಾಗು ಎಷ್ಟು ಟ್ರಾಲರ್‌ಗಳಿವೆ ?

ಆ) ಈ ಅವಧಿಯಲ್ಲಿ ಮೀನುಗಾರರು ಹಿಡಿದ ಮೀನಿನ ಪ್ರಮಾಣ ಎಷ್ಟು. ಹಾಗೂ ಆ ಮೀನಿನ ಒಟ್ಟು ಮೌತ್ತ ಎಷ್ಟು ?